# ಶಹಾಬುದ್ದೀನ್ ಕಾಲೇಖಾನ್ ಅವರ 'ಅದೃಷ್ಟ ಕೈದಿ'

**ರಾಜಶೇಖರ ಬಿರಾದಾರ**

ಸಹಾಯಕ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಯರಗಟ್ಟಿ, ಬೆಳಗಾವಿ.

DOI: https://doi.org/10.5281/zenodo.18700338

## ABSTRACT:

'ಕಾಲವನ್ನು ಮರೆಸುವ, ಚಿತ್ತಭಿತ್ತಿಯಲ್ಲಿ ಅಚ್ಚಳಿಯದೆ, ಸದಾ ಉಳಿಯುವ, ನೋವ ಮರೆಸುವ ಮಾಂತ್ರಿಕತೆ'ಯು ಸಾಹಿತ್ಯಕ್ಕೆ ಇರುತ್ತದೆ. ಇದನ್ನರಿತ ಹಲವರು ಪೊಲೀಸ್ ಇಲಾಖೆಯಲ್ಲಿದ್ದರೂ ಸಾಹಿತ್ಯ ಸಂಗಾತಿಗಳಾಗಿದ್ದಾರೆ. ಪೊಲೀಸ್ ಇಲಾಖೆಯ ಪ್ರಖರ ಪ್ರಭಾವಳಿಯ ಮುಂದೆ ನೆರಳಿನಂತಿರುವ ಬಂಧೀಖಾನೆ ಇಲಾಖೆಯಲ್ಲಿ ಅಧೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಶಹಾಬುದ್ದೀನ್ ಕಾಲೇಖಾನ್ ಅವರು 'ಕಾವ್ಯ ಸ್ಫೂರ್ತಿ' ಹಾಗೂ 'ಅದೃಷ್ಟ ಕೈದಿ' ಎಂಬ ಎರಡು ಕವನ ಸಂಕಲನಗಳನ್ನು ರಚಿಸುವ ಮೂಲಕ ಒತ್ತಡದ ಕೆಲಸಕ್ಕೆ ಹೆಸರುವಾಸಿಯಾಗಿರುವ ಇಲಾಖೆಯಲ್ಲಿದ್ದೂ ಸಾಹಿತ್ಯಾಸಕ್ತಿಯನ್ನು, ಸಾಹಿತ್ಯ ರಚನೆಯ ವಿಶಿಷ್ಟ ಹವ್ಯಾಸವನ್ನು ರೂಢಿಸಿಕೊಂಡಿರುವ ವಿಶಿಷ್ಟ ಅಧಿಕಾರಿಯಾಗಿದ್ದಾರೆ.

ಜಾತಿ, ಧರ್ಮ, ಭಾಷೆ, ಪ್ರದೇಶ ಸೇರಿದಂತೆ ಕ್ಷುಲ್ಲಕ ಸಂಗತಿಗಳನ್ನು ಆಧರಿಸಿ 'ಹತ್ತಿರವಿದ್ದೂ ದೂರ'ವಾಗುತ್ತಿರುವ ಪ್ರಸಕ್ತ ಸಂದರ್ಭದಲ್ಲಿ ಕಾಲೇಖಾನ್ ಅವರ ಕವಿತೆಗಳು ಉಪಯುಕ್ತವೆನಿಸುತ್ತವೆ. ಈ ಸಂಕಲನದಲ್ಲಿ ಆಧುನಿಕೋತ್ತರ ಕಾಲದ ಅಗತ್ಯಗಳಾಗಿರುವ ಸಮಾನತೆ, ಭ್ರಾತೃತ್ವ, ಸಾಮರಸ್ಯ, ಸಹಬಾಳ್ವೆ, ಪ್ರಕೃತಿ ಪ್ರೇಮ, ಪ್ರೀತಿ–ಪ್ರೇಮ–ಪ್ರಣಯ–ವಿರಹ ಭಾವಾಭಿವ್ಯಕ್ತಿಯ ಕವಿತೆಗಳಿವೆ. ನಾಡು–ನುಡಿ–ದೇಶಾಭಿಮಾನವನ್ನು ಹುರಿದುಂಬಿಸುವ ಕವಿತೆಗಳಿವೆ. ಭಾಷೆಯು ಸರಳವಾಗಿದ್ದು, ಸುಲಭವಾಗಿ ಅರ್ಥವಾಗುವಂತಿದೆ.

## KEYWORDS:

ಪೊಲೀಸ್, ಅಪರಾಧಿ, ಕೈದಿ, ಬಂಧೀಖಾನೆ, ಗೋಡೆ, ಪಶ್ಚಾತ್ತಾಪ, ಕನ್ನಡಿ, ವಸಂತ.

**ಪಂಡಿತರುಂ ವಿವಿಧ ಕಲಾ**
**ಮಂಡಿತರುಂ ಕೇಳತಕ್ಕ ಕೃತಿಯಂ ಕ್ಷಿತಿಯೊಳ್**
**ಕಂಡರ್ ಕೇಳ್ವೊಡೆ ಗೊರವರ**
**ದುಂಡುಚಿಯೇ ಬೀದಿವರಿವ ಬೀರನ ಕಥೆಯೇ**

**(ಮಧುರ ಕವಿ, ಧರ್ಮನಾಥ ಪುರಾಣ, ಪು. 21)**

ಹದಿನಾಲ್ಕನೆಯ ಶತಮಾನದ ಮಧುರ ಕವಿಯು ಯಾರು ಕಾವ್ಯವನ್ನು ರಚಿಸಬಾರದು/ರಚಿಸಲಾಗದು ಎಂಬ ಪಾರಂಪರಿಕ ನಂಬಿಕೆಯ ವಿಷಯವನ್ನು ಇಲ್ಲಿ ಪ್ರಸ್ತಾಪಿಸಿದ್ದಾನೆ. ಆಸ್ಥಾನದ ಪಂಡಿತ ವರ್ಗವು ಮೆಚ್ಚಿಕೊಂಡಾಗ ಮಾತ್ರ ಕಾವ್ಯವು ಅಧಿಕೃತತೆಯನ್ನು ಪಡೆಯುತ್ತದೆ. ಅಂತಹ ಗಂಭೀರ ರಚನೆಯಾಗಿರುವ ಕಾವ್ಯವನ್ನು ಬರೆಯುವವರೂ ಪಂಡಿತರೇ ಆಗಿರಬೇಕು. ಭಾಷೆ, ಛಂದಸ್ಸು, ಅಲಂಕಾರ ಸೇರಿದಂತೆ ವಿವಿಧ ಶಾಸ್ತ್ರಗಳಲ್ಲಿ ಪರಿಣಿತಿಯನ್ನು ಸಾಧಿಸಿರಬೇಕು. ಶಾಸ್ತ್ರಬದ್ಧವಾಗಿ ಕಾವ್ಯ ರಚನೆಯಲ್ಲಿ ತೊಡಗಿ, ಅದೇ ಶಿಸ್ತಿನಿಂದ ಪಂಡಿತರ ಮುಂದೆ ಅದನ್ನು ಮಂಡಿಸಬೇಕು. ಇದನ್ನು ಬಿಟ್ಟು ಯಾರು ಬೇಕಾದವರು ಕಾವ್ಯ ಕೃಷಿಯಲ್ಲಿ ತೊಡಗಲು ಅದೇನು ಬೀದಿಯಲ್ಲಿ ಹಾಡುವ ಬೀರನ ಕಥೆಯಲ್ಲ! ಎಂದು ಹೇಳುತ್ತಾನೆ. ಆದರೆ ಮಧುರ ಕವಿಯ ಈ ಮಾತು ತಾರ್ಕಿಕವಾದುದಲ್ಲ. ಏಕೆಂದರೆ ಕಾವ್ಯ ರಚನೆಯ ಪರಿಣತಿಗೆ ಜಾತಿ, ಧರ್ಮ, ವಿದ್ಯೆ, ಪದವಿ, ಪ್ರದೇಶ, ಲಿಂಗ, ವೃತ್ತಿಗಳು ಮಾನದಂಡಗಳಲ್ಲ. ಸೂಕ್ಷ್ಮ ಸಂವೇದನಾಶೀಲತೆ, ಸೃಜನಶೀಲ

ಮನೋಭಾವ, ಸತತಾಭ್ಯಾಸ, ಸಮಾನ ಮನಸ್ಕರ ಒಡನಾಟ ಮತ್ತು ಮುಖ್ಯವಾಗಿ 'ಕಣ್ಣಿಗೆ ಕಾಣದ ನೋಟವನ್ನೂ ದರ್ಶಿಸುವ, ಕಿವಿಗೆ ಕೇಳದ ಮೌನವನ್ನು ಆಲಿಸುವ ಕಿವಿಯಿದ್ದವರೆಲ್ಲರೂ ಕವಿಯಾಗಬಲ್ಲರು'. ಇಂತಹ ದೃಷ್ಟಿಕೋನವನ್ನು ಬೆಳೆಸಿಕೊಳ್ಳಲು ಪಂಚೇಂದ್ರಿಯಗಳು ದಶೇಂದ್ರಿಯಗಳಾಗಬೇಕು (ಅಂತರಂಗದ ಐದು, ಬಹಿರಂಗದ ಐದು).

'ಓದುವ, ಬರೆಯುವ ಹವ್ಯಾಸ ಇರುವವರು ಎಂದಿಗೂ ಏಕಾಂಗಿಯಾಗಲಾರರು' ಎಂಬ ಮಾತಿನಂತೆ ಸಾಹಿತ್ಯ, ಸಂಗೀತ, ಕಲೆಯಂತಹ ರಚನಾತ್ಮಕ ಅಭಿರುಚಿಗಳು ಆಧುನಿಕ ಬದುಕಿನ ಅತ್ಯುತ್ತಮ ಒತ್ತಡ ನಿವಾರಕಗಳಾಗಿವೆ. ಅಧ್ಯಾಪನದಂತಹ ಕೆಲವು ವೃತ್ತಿಗಳು ಇಂತಹ ಆಸಕ್ತಿಯನ್ನು ಹೊಂದಲು ಪೂರಕವಾಗಿರುತ್ತದೆ. ಹಾಗೆಂದು ಎಲ್ಲ ಅಧ್ಯಾಪಕರು ಕವಿ, ಸಾಹಿತಿ, ಕಲಾವಿದರೇ ಎಂದರ್ಥವಲ್ಲ! ಬಹುತೇಕ ಅಧ್ಯಾಪಕರ ಪ್ರವೃತ್ತಿಗಳು ತಮ್ಮ ವೃತ್ತಿಗೆ ಹೊರತಾದವುಗಳೇ ಆಗಿರುತ್ತವೆ. 'ವೃತ್ತಿಯೇ ಪ್ರವೃತ್ತಿಯಾದರೆ ನಿವೃತ್ತಿಯ ಅಗತ್ಯ, ಭಯವಿಲ್ಲ; ಬದುಕು ಸ್ವರ್ಗ ಸದೃಶವಾಗುತ್ತದೆ. ಅವೆರಡೂ ಬೇರೆ ಬೇರೆಯಾದರೆ ಕೆಲಸದ ಒತ್ತಡ, ಏಕತಾನತೆಯಿಂದ ಬಿಡುವು, ನಿರಾಳತೆ; ಬದುಕು ನಂದನವನವಾಗುತ್ತದೆ'. ಸಾಹಿತ್ಯಾಸಕ್ತಿಯಂತಹ ರಚನಾತ್ಮಕ ಹವ್ಯಾಸಗಳಿಂದ ಕೆಲಸದಲ್ಲಿ ಹೊಸ ಚೈತನ್ಯ, ಉತ್ಸಾಹ, ಹುರುಪು ದೊರೆಯುತ್ತದೆ. ಆದರೆ ದಿನದ ಇಪ್ಪತ್ನಾಲ್ಕು ಗಂಟೆಗಳ ಅವಧಿಯೂ ಜನರ ಜಂಜಾಟಗಳನ್ನು ಎದುರಿಸುವ ಒತ್ತಡದ ವೃತ್ತಿಗಳಲ್ಲಿ ಒಂದಾದ ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತ ಸಾಹಿತ್ಯಾಸಕ್ತಿಯನ್ನು ಸ್ವಪೋಷಣೆ ಮಾಡಿಕೊಳ್ಳುವುದು ಸವಾಲಿನ ಕೆಲಸವೇ ಸರಿ.

ನಿತ್ಯ ಜೀವನದಲ್ಲಿ ಎಷ್ಟೇ ಒತ್ತಡಗಳಿದ್ದರೂ ಸಾಹಿತ್ಯಾಸಕ್ತಿಯು ಅದನ್ನು ಕಡಿಮೆ ಮಾಡುವುದರೊಂದಿಗೆ ನಮ್ಮನ್ನು ಸರಿದಾರಿಯಲ್ಲಿಯೇ ನಡೆಯುವಂತೆ ಪ್ರಚೋದಿಸುತ್ತದೆ. ಆದ್ದರಿಂದಲೇ 'ಅಧಿಕಾರ ಹಾದಿ ತಪ್ಪಸ್ತದ, ಸಾಹಿತ್ಯ ಹಾದಿ ಹಿಡಸ್ತದ' ಎಂಬ ಮಾತು ಜನಜನಿತವಾಗಿದೆ. ಅದರಲ್ಲೂ ದಿನಬೆಳಗಾದರೆ ಪರೇಡ್, ರೋಲ್‌ಕಾಲ್, ಸೆಲ್ಯೂಟ್, ಬಂದೋಬಸ್ತ್, ಆರೋಪಿ, ಅಪರಾಧಿ, ಶಿಕ್ಷೆ, ಪರೋಲ್, ಲಾಠಿ, ಬೂಟು, ಏಟು, ಬೈಗುಳದಂತಹ ಗಂಭೀರ ವೃತ್ತಿಯ ಪೊಲೀಸರಿಗಂತೂ ಸಾಹಿತ್ಯಾಸಕ್ತಿಯಂತಹ ಹವ್ಯಾಸಗಳು ಅತ್ಯಗತ್ಯ. ಕವಿ ಕಾಲೇಖಾನ್ ಅವರ ಮಾತುಗಳಲ್ಲೇ ಹೇಳುವುದಾದರೆ 'ಕಾಲವನ್ನು ಮರೆಸುವ, ಚಿತ್ತಭಿತ್ತಿಯಲ್ಲಿ ಅಚ್ಚಳಿಯದೆ, ಸದಾ ಉಳಿಯುವ, ನೋವ ಮರೆಸುವ ಮಾಂತ್ರಿಕತೆ'ಯು ಸಾಹಿತ್ಯಕ್ಕೆ ಇರುತ್ತದೆ. ಇದನ್ನರಿತ ಹಲವರು ಪೊಲೀಸ್ ಇಲಾಖೆಯಲ್ಲಿದ್ದರೂ ಸಾಹಿತ್ಯ ಸಂಗಾತಿಗಳಾಗಿದ್ದಾರೆ.

ಕನ್ನಡದ ಮೊದಲ ಕಾದಂಬರಿಕಾರರಾದ ಗುಲ್ವಾಡಿ ವೆಂಕಟರಾಯರು (ಇಂದಿರಾಬಾಯಿ), ಹಾಸ್ಯಬ್ರಹ್ಮ ಬೀಚಿಯವರು ಪೊಲೀಸ್ ಇಲಾಖೆಯ ನೌಕರರು. ಡಿ.ವಿ. ಗುರುಪ್ರಸಾದ, ಡಾ. ಅಜಯಕುಮಾರ ಸಿಂಗ್, ಡಾ. ಸುಭಾಷ ಭರಣಿ, ಡಾ. ಧರಣೀದೇವಿ ಮಾಲಗತ್ತಿ, ಡಾ. ಬಿ.ಆರ್. ರವಿಕಾಂತೇಗೌಡ, ಡಾ. ಸಿ. ರಾಜಪ್ಪ, ರವಿ ಚಿಕ್ಕನಾಯಕನಹಳ್ಳಿ ಸೇರಿದಂತೆ ಪೊಲೀಸ್ ಇಲಾಖೆಯ ಉನ್ನತಾಧಿಕಾರಿಗಳು ಮಾತ್ರವಲ್ಲದೆ ಜಿ.ಎ. ಜಗದೀಶ, ಶಿವಾನಂದ ಗುಡಗನಟ್ಟಿ, ವಿಜಯ ಸಕ್ರಿ, ಮೌಲಾಲಿ ಆಲಗೂರ, ರಮೇಶ ಮಡಿವಾಳರ ಹಾಗೂ ಎಫ್.ಐ. ತಳವಾರ ಸೇರಿದಂತೆ ಹಲವರು ತಮ್ಮ ಬಿಡುವಿಲ್ಲದ ಒತ್ತಡದ ಕೆಲಸದ ಮಧ್ಯೆಯೂ ಸಾಹಿತ್ಯ, ಸಂಗೀತದಂತಹ ಬಹುಮುಖಿ ಹವ್ಯಾಸಗಳೊಂದಿಗೆ ವಿಶಿಷ್ಟ ಅಧಿಕಾರಿ/ ನೌಕರರೆಂಬ ಅಭಿದಾನಕ್ಕೆ ಪಾತ್ರರಾಗಿದ್ದಾರೆ. ಪೊಲೀಸ್ ಇಲಾಖೆಯ ಪ್ರಖರ ಪ್ರಭಾವಳಿಯ ಮುಂದೆ ನೆರಳಿನಂತಿರುವ ಬಂಧೀಖಾನೆ ಇಲಾಖೆಯಲ್ಲಿ ಅಧೀಕ್ಷಕರಾಗಿ ಕರ್ತವ್ಯ

ನಿರ್ವಹಿಸುತ್ತಿರುವ ಶಹಾಬುದ್ದೀನ್ ಕಾಲೇಖಾನ್ ಅವರು 'ಕಾವ್ಯ ಸ್ಫೂರ್ತಿ' ಹಾಗೂ 'ಅದೃಷ್ಟ ಕೈದಿ' ಎಂಬ ಎರಡು ಕವನ ಸಂಕಲನಗಳನ್ನು ರಚಿಸುವ ಮೂಲಕ ಈ ಸಾಲಿನ ಪ್ರಮುಖ ಪೊಲೀಸ್ ಅಧಿಕಾರಿಯಾಗಿದ್ದಾರೆ.

ಈಗಾಗಲೇ 'ಕಾವ್ಯ ಸ್ಫೂರ್ತಿ' ಎಂಬ ಕವನ ಸಂಕಲನವನ್ನು ಕನ್ನಡ ಸಾರಸ್ವತ ಲೋಕಕ್ಕೆ ಸಮರ್ಪಿಸಿರುವ ಕಾಲೇಖಾನ್ ಅವರ ಕಾವ್ಯ ಪ್ರತಿಭೆಯು 'ಅದೃಷ್ಟ ಕೈದಿ'ಯಲ್ಲಿ ಮತ್ತಷ್ಟು ಪಳಗಿದಂತೆ ಕಾಣಿಸುತ್ತದೆ. 'ಹಾಡಿ ಹಾಡಿ ರಾಗ..' ಎಂಬಂತೆ ಕಾಲೇಖಾನ್ ಅವರ ಕವಿತಾ ಸಾಮರ್ಥ್ಯವು ಮಾಗುವಿಕೆಯ ಕಡೆಗೆ ಸಾಗುತ್ತಿರುವ ಸುಳಿಹುಗಳು ಅವರ ಈ ಸಂಕಲನದಲ್ಲಿ ಕಾಣಿಸುತ್ತಿವೆ. ಕವಿತೆಗಳ ವಸ್ತು – ತಂತ್ರ, ನಿರೂಪಣಾ ಶೈಲಿ, ಅಲಂಕಾರಗಳ ಬಳಕೆ ಸೇರಿದಂತೆ ಹಲವು ವಿಷಯಗಳಲ್ಲಿ ಈ ಸಂಗತಿಯನ್ನು ಮನಗಾಣಬಹುದು. ಕಾಲೇಖಾನ್ ಅವರ ಮೊದಲ ಕವನ ಸಂಕಲನದಲ್ಲಿ ಕಾಣಸಿಗದ 'ಜನಮಾನಸಕ್ಕೆ ಅಪರಿಚಿತವಾದ ಬಂಧೀಖಾನೆ ಇಲಾಖೆಯ ಒಳಹೊರಗುಗಳು, ಅಲ್ಲಿನ ವೃತ್ತಿ ಬದುಕಿನ ಏರಿಳಿತಗಳು, ತವಕ–ತಲ್ಲಣಗಳು, ಮೇಲಾಧಿಕಾರಿ–ಅಧೀನ ಸಿಬ್ಬಂದಿಗಳ ಭಾವಲಹರಿಗಳು ಹಾಗೂ ಬಹಳ ಮುಖ್ಯವಾಗಿ ಸೆರೆಮನೆಗೆ ಬರುವ ತರಹೇವಾರಿ ಕೈದಿಗಳ ಮನಸ್ಥಿತಿ, ವರ್ತನೆ–ಪರಿವರ್ತನೆಗಳು' ಸೇರಿದಂತೆ ಹಲವು ವಿಷಯಗಳ ಕುರಿತು ಕವಿತೆಗಳನ್ನು ಬರೆದಿದ್ದಾರೆ. ಸಂಕಲನದ 'ನಾವೆಲ್ಲ ಕೈದಿಗಳು', 'ಅದೃಷ್ಟ ಕೈದಿ', 'ರೂಢಾಪರಾಧಿ', 'ಕಂಬಿಗಳ ಹಿಂದೆ' ಮತ್ತು 'ಗೋಡೆ' ಎಂಬ ಕವಿತೆಗಳು 'ಬಂಧೀಖಾನೆ ಇಲಾಖೆ'ಯ ಹಲವು ಆಯಾಮಗಳನ್ನು ಚಿತ್ರಿಸುತ್ತವೆ. ಸೆರೆಮನೆಯ ಅಧಿಕಾರಿಯಾಗಿ ಅಲ್ಲಿನ ಕೈದಿಗಳನ್ನು ಅಧಿಕಾರಿಯಾಗಿ ಮಾತ್ರ ನೋಡದೆ, ಕವಿಮನಸ್ಸಿನಿಂದ ನೋಡಿದ ಕಾಲೇಖಾನ್ ಅವರಿಗೆ ತಾವೇ ಕೈದಿಯೆನಿಸಿದೆ.

**ನಾವೆಲ್ಲ ಕೈದಿಗಳು**
**ಭಾವನೆಗಳಾಚೆ ಭಾವಿಸಲಾರೆವು**
**ನಾವು ಜ್ಞಾನಮಿತಿಯ ಕೈದಿಗಳು**
**ಜ್ಞಾನದಾಚೆ ತಿಳಿಯಲಾರೆವು**
...
**ಅವರೆಲ್ಲ ಕಂಬಿಗಳ ಒಳಗೆ**
**ಕಂಬಿಗಳ ಹೊರಗಿದ್ದರೂ ನಾನೂ ಬಂಧಿ**
**ಅವರನ್ನು ಕಾಯುವ ಕೈದಿ**

ಸರಳುಗಳಾಚೆಯಿಂದ ನೋಡುವ ಕೈದಿಗಳಿಗೆ ಹೊರಗಿರುವವರೆಲ್ಲರೂ ಕೈದಿಗಳಂತೆ ಕಾಣುವುದು ಸ್ವಾಭಾವಿಕ. ಅದು ಮಾನಸಿಕವಾಗಿಯೂ ಹೌದು; ಭೌತಿಕ ನೋಟದ ದೃಷ್ಟಿಯಿಂದಲೂ ಹೌದು. ಸೆರೆಯೊಳಗಿರುವವರಿಗಿಂತಲೂ ಹೊರಗಿದ್ದೂ ಭಾವನೆ, ವಿಚಾರ, ದೃಷ್ಟಿಕೋನ, ಸಂಬಂಧ, ದೇವರು, ಧರ್ಮದ ವಿಚಾರಗಳಲ್ಲಿ 'ನಾವು ಕೈದಿಗಳು' ಎನ್ನುವ ಕವಿಯ ಸಾಲುಗಳು ಆಪ್ತವೆನಿಸುತ್ತವೆ. ಕಥನ ಕವನದಂತಿರುವ 'ರೂಢಾಪರಾಧಿ'ಯು ಕದ್ದ ಬ್ಯಾಗಿನಲ್ಲಿದ್ದ ರಕ್ತದ ಚೀಟಿಯನ್ನು ನೋಡಿ ತನ್ನ ರಕ್ತವನ್ನು ಕೊಡುವುದಷ್ಟೇ ಅಲ್ಲದೆ 'ಇನ್ನೊಮ್ಮೆ ರೂಢಾಪರಾಧಿ ಆಗಬಾರದೆಂದು ಶಪಥ' ಮಾಡುವ ಮೂಲಕ ಸಾತ್ವಿಕ ಪರಿವರ್ತನೆ ಹೊಂದಿ ಓದುಗರ ಕಣ್ಣನ್ನು ಒದ್ದೆ ಮಾಡಿಸುತ್ತಾನೆ.

**ಪಶ್ಚಾತ್ತಾಪದ ಬೆಂಕಿಯು**
**ಉರಿಯುತಿದೆ**
**ಮಾನದಲ್ಲಿಯೂ ಕರಗಿವೆ**

**ತಪ್ಪುಗಳ ಲೆಕ್ಕ**

ಎಂಬ 'ಗೋಡೆ' ಕವಿತೆಯ ಸಾಲುಗಳು ಸೆರೆಮನೆಯೊಳಗಿರುವ ಕೈದಿಗಳ ಮನಸ್ಥಿತಿಯನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತದೆ. ಜೈಲಿಗೆ ಬರುವ ಕೈದಿಗಳು ಮತ್ತು ನಿತ್ಯ ಜೀವನದಲ್ಲಿ ಕಷ್ಟನಷ್ಟ, ಅವಮಾನ, ನಿಂದನೆ, ಹತಾಶೆ, ನೋವುಗಳಿಂದ ಹತಾಶರಾದ ಜೀವಗಳಿಗೂ ಕವಿ ಸಾಂತ್ವನ ಹೇಳುತ್ತಾರೆ. 'ನಿಲ್ಲಬೇಡ', 'ನಗುತಾ ನಡೆ ನೀನು', 'ಕ್ಯಾನ್ಸರ್', 'ಗೆಳೆಯಾ' ಮತ್ತು 'ನಿಮ್ಮನ್ನು ನೀವು ನೋಡಿಕೊಳ್ಳಿ' ಕವಿತೆಗಳಲ್ಲಿ ವಿವಿಧ ಕಾರಣಗಳಿಗೆ ಹತಾಶರಾದ ಜೀವಿಗಳಿಗೆ ಆತ್ಮಸ್ಥೈರ್ಯವನ್ನು ತುಂಬುತ್ತಾರೆ.

**ನಿಲ್ಲಬೇಡ ನಡೆಯುತ್ತಿರು**
**ಅಡೆತಡೆಗಳನ್ನು ದಾಟಿ**
**ಗಮ್ಯ ಸೇರುವವರೆಗೆ ವಿರಮಿಸದಿರು**

'ನಿಲ್ಲಬೇಡ' ಎಂಬ ಕವಿತೆಯ ಈ ಸಾಲುಗಳು ಚೇತೋಹಾರಿಯಾಗಿದ್ದು, ಜೀವನದಲ್ಲಿ ಎದುರಾಗುವ ಅಡೆತಡೆಗಳನ್ನು ಮೀರಿ ಗುರಿ ತಲುಪುವಂತೆ ಪ್ರೇರೇಪಿಸುತ್ತವೆ. 'ಸ್ವಯಂ ಬೆಳಗದ ಜ್ಯೋತಿಯು ಇನ್ನೊಂದು ಜ್ಯೋತಿಯನ್ನು ಬೆಳಗಿಸಲಾರದು' ಎಂಬ ವಿಶ್ವಕವಿ ರವೀಂದ್ರನಾಥ ಠಾಕೂರರ ಮಾತುಗಳ ಆಶಯದಂತೆ ಇತರರನ್ನು ಹುರಿದುಂಬಿಸುವ ಮುನ್ನ ಕವಿಯ ಮನಸ್ಸು ಸ್ವಮನದ ಆತ್ಮಾವಲೋಕನ, ಆತ್ಮಶೋಧನೆಯನ್ನು ಮಾಡುತ್ತದೆ. 'ಪ್ರಯಾಣಿಕರು', 'ಪ್ರಪಂಚವೆಂಬ ಕನ್ನಡಿ', 'ಕೆಲವು ಪ್ರಶ್ನೆಗಳು', 'ಆಸೆ', 'ಕಲಾವಿದರು', 'ಬೆಳಕು', 'ವಿಷವೃಕ್ಷ', 'ಓ ಮನವೇ' ಮತ್ತು 'ಕೋತಿಯಾಗ್ಯೆತಿ ಮನವು' ಎಂಬ ಕವಿತೆಗಳಲ್ಲಿ ಕವಿಯು ತನ್ನ ಅಂತರಾತ್ಮವನ್ನೇ ಶೋಧಿಸುತ್ತಿರುವ ಅಧ್ಯಾತ್ಮಿಕ ಚಿಂತಕನಂತೆ ಕಾಣಿಸುತ್ತಾರೆ.

**ಪ್ರಪಂಚದ ಕನ್ನಡಿ, ಮನಸ್ಸಿನ ಕನ್ನಡಿ**
**ಒಂದೇ ಆದಾಗ ಅಂದೇ ಜೀವನ ಸಾರ್ಥಕ**

ಎಂಬ ಸಾಲುಗಳು ಅಧ್ಯಾತ್ಮಿಕ ಚಿಂತನೆಯ, ಮನುಷ್ಯ ಜೀವನದ ಗಮ್ಯವನ್ನು ಸೂಚಿಸುತ್ತವೆ. ಇಂತಹ ಅಪೂರ್ವ ಚಿಂತನೆಯಲ್ಲಿ ತೊಡಗಿದ ಕವಿಯ ದೇವರ ಕಲ್ಪನೆಯು ವಿಶಿಷ್ಟವಾಗಿದೆ. 'ಕಲ್ಪನೆ' ಮತ್ತು 'ಮುಸುಕು' ಕವಿತೆಗಳಲ್ಲಿ 'ನೀನು ಅಮೂರ್ತವಾಗಿದ್ದೀಯಾ, ಕಲ್ಪನೆಗಿಂತ ಹೆಚ್ಚೇನೂ ಇಲ್ಲ', 'ನೀನು ಇದ್ದಿಯಾ ಎಂದು ನನಗೆ ಗೊತ್ತು ನನ್ನ ದೃಷ್ಟಿಯಲ್ಲಿ' ಎಂದು ತಮ್ಮ ಕಲ್ಪನೆಯ ದೇವರು 'ಮುಸುಕುಧಾರಿ' ಎಂದು ಪ್ರತಿಪಾದಿಸುತ್ತಾರೆ. ದೇವರು, ಅಧ್ಯಾತ್ಮವೆಂಬ ಪಾರಮಾರ್ಥಿಕ ಸಂಗತಿಗಳನ್ನು ಮಾತ್ರ ಚಿಂತಿಸದೆ ವಾಸ್ತವಾಂಶಗಳ ಕಡೆಗೂ ಕವಿಯು ತಮ್ಮ ವಿಶೇಷ ನೋಟವನ್ನು ಬೀರಿದ್ದಾರೆ. 'ಬಿಟ್ಟು ಬಿಡಿ', 'ಉತ್ತೀರ್ಣತೆ', 'ಮಗು', 'ಮನಸ್ಸುಳ್ಳ ಪ್ರತಿಬಿಂಬ', 'ಜೀವನದ ರಸ್ತೆಯಲಿ', 'ಹಣ', 'ಹೊಂದಾಣಿಕೆ', 'ಸುಳಿವು ಸಾಕು' ಮತ್ತು 'ವಿಪರ್ಯಾಸ' ಎಂಬ ಕವಿತೆಗಳಲ್ಲಿ "ನೀವು ಯಾವಾಗಲೂ ಓಡುತ್ತಿರಿ, ನೀವು ಓಟ ನಿಲ್ಲಿಸಿದ ದಿನ ಜೀವನ ನಿಲ್ಲುತ್ತದೆ. ಎಂದಿಗೂ ಜೀವನವನ್ನು ಆನಂದಿಸಿ" ಎಂದು ಜೀವನದ ಅಂತಿಮ ಸತ್ಯವನ್ನು ಅರುಹಿದ್ದಾರೆ.

ಈ ಸತ್ಯವನ್ನು ಅರಿತ ನಂತರ ಜಾತಿ, ಧರ್ಮ, ಲಿಂಗ, ಭಾಷೆಯೆಂಬ ತರತಮಗಳಿಲ್ಲದೆ ಸಾಮರಸ್ಯದಿಂದ ಬದುಕಬೇಕೆಂಬುದನ್ನು ಇಲ್ಲಿನ ಕವಿತೆಗಳಿಂದ ಅರಿಯಬಹುದು. 'ಯುಗಾದಿ', 'ಸಂಕ್ರಾಂತಿ' ಮತ್ತು 'ಮುಕ್ತಿಯ ಸಂಚಲನ' ಎಂಬ ಕವಿತೆಗಳಲ್ಲಿ ಕನ್ನಡಿಗರು ಹಿಂದೂ-ಮುಸ್ಲಿಂ ಭೇದವಿಲ್ಲದೆ ಪಾಲ್ಗೊಳ್ಳುವ ದೊಡ್ಡ ಹಬ್ಬಗಳಾದ ಯುಗಾದಿ, ಸಂಕ್ರಾಂತಿ ಮತ್ತು ರಂಜಾನ್ ಹಬ್ಬಗಳ ವಿಶೇಷತೆ ಮತ್ತು ಈ ಹಬ್ಬಗಳ ಮೂಲಕ ಜನರೆಲ್ಲ ಒಂದಾಗಿ ಬಾಳಲಿ ಎಂಬ ಸದಾಶಯವನ್ನು ಕವಿಯು ವ್ಯಕ್ತಪಡಿಸುತ್ತಾರೆ. ಜಾತಿ, ಧರ್ಮ, ಭಾಷೆ, ಪ್ರದೇಶ

ಸೇರಿದಂತೆ ಕ್ಷುಲ್ಲಕ ಸಂಗತಿಗಳನ್ನು ಆಧರಿಸಿ 'ಹತ್ತಿರವಿದ್ದೂ ದೂರ'ವಾಗುತ್ತಿರುವ ಪ್ರಸಕ್ತ ಸಂದರ್ಭದಲ್ಲಿ ಕಾಲೇಖಾನ್ ಅವರ ಕವಿತೆಗಳು ಉಪಯುಕ್ತವೆನಿಸುತ್ತವೆ.

**ವಸಂತದ ಹೊಸ ಚಿಗುರು ವರ್ಷವಿಡೀ**
**ಮೌನವಾಗಿರುವ ಕೋಗಿಲೆಗೆ**
**ಕೂಜನದ ತನಕ ತರಲಿ**
**ಕ್ರೋಧಿ ಸಂವತ್ಸರದಲ್ಲಿ ಎಲ್ಲವೂ**
**ಒಂದಾಗಿರಲಿ**

ಎನ್ನುವ ಈ ಸಾಮರಸ್ಯವನ್ನು ನಾವು ಪ್ರಕೃತಿಯನ್ನು ನೋಡಿ ಕಲಿಯಬೇಕು. ಬೆಳೆಯುವಾಗ ಬೇರೆ ಬೇರೆಯಾಗಿರುವ ಸಸಿಗಳು ಮರವಾಗಿ ಬೆಳೆದಂತೆ ತಮ್ಮ ರೆಂಬೆಕೊಂಬೆಗಳನ್ನು ಪರಸ್ಪರ ಚಾಚಿಕೊಂಡು ಒಂದಾಗುತ್ತವೆ. ಆದರೆ ಬಾಲ್ಯದಲ್ಲಿ ಯಾವುದೇ ತರತಮವಿಲ್ಲದೆ ಬೆಳೆಯುವ ಮನುಷ್ಯನು ಬೆಳೆದಂತೆ ಜಾತಿ, ಧರ್ಮ, ಭಾಷೆಯೆಂಬ ಸಂಕೋಲೆಗಳಲ್ಲಿ ಬಂಧಿತನಾಗಿ ಪರಸ್ಪರ ವಿಭಜನೆಗೆ ಒಳಗಾಗುತ್ತಾನೆ. 'ನೋವ ಮರೆಯಲು ಮಳೆ', 'ನಾನು ನಡೆಯುತ್ತೇನೆ', 'ಮಳೆ', 'ಮೊದಲ ಮಳೆ' ಮತ್ತು 'ಚಿಗುರು' ಕವಿತೆಗಳಲ್ಲಿ ಕವಿಯು ಪ್ರಕೃತಿ ಆರಾಧನೆಯನ್ನು ಮಾಡುತ್ತಾರೆ.

**ಮಳೆಯೇ ಎಲೆಯ ಮೇಲಿನ ಇಬ್ಬನಿಯ ಸವಿಯಲು ಕಲಿಸಿದೆ**
**... ಬದುಕು ಸಪ್ತಬಣ್ಣಗಳನ್ನು ರಚಿಸಿದೆ**
**... ಕಷ್ಟಗಳಿಗೆ ಸಹನೆಯಿಂದ ಎದುರಿಸುವುದನ್ನು ಕಲಿಸಿದೆ**
**... ಕಣ್ಣಲಿ ಮಿಂಚಿನ ಆಸೆಯನ್ನು ಹರಿಸಿದೆ**

ಎನ್ನುವಲ್ಲಿ 'ಮನುಷ್ಯನು ಪ್ರಕೃತಿಯಿಂದ ಕಲಿಯಬೇಕಾದ ಸಂಗತಿಗಳ ಬಹಳಷ್ಟಿವೆ' ಎಂಬುದನ್ನು ಸೂಚಿಸುತ್ತಾರೆ. ಇದರೊಂದಿಗೆ ಈ ಸಂಕಲನದಲ್ಲಿ ಎಂದಿನಂತೆ ಪ್ರೀತಿ-ಪ್ರೇಮ-ಪ್ರಣಯ-ವಿರಹ ಭಾವಾಭಿವ್ಯಕ್ತಿಯ ಕವಿತೆಗಳಿವೆ. ನಾಡು-ನುಡಿ-ದೇಶಾಭಿಮಾನವನ್ನು ಹುರಿದುಂಬಿಸುವ ಕವಿತೆಗಳೂ ಇವೆ. ಕವಿತೆಗಳ ಭಾಷೆಯು ಸರಳವಾಗಿದ್ದು, ಸುಲಭವಾಗಿ ಅರ್ಥವಾಗುವಂತಿದೆ. ಒಟ್ಟಾರೆಯಾಗಿ 'ಅದೃಷ್ಟ ಕೈದಿ'ಯು ಸಮಕಾಲೀನ ಕವಿತೆಗಳಲ್ಲಿ ಓದಬಹುದಾದ ಕವಿತೆಗಳ ಸಂಕಲನವಾಗಿದೆ.

ಆಧುನಿಕ ಕನ್ನಡ ಸಾಹಿತ್ಯವು ನವೋದಯ, ಪ್ರಗತಿಶೀಲ, ನವ್ಯ, ದಲಿತ-ಬಂಡಾಯ ಹಾಗೂ ಸ್ತ್ರೀವಾದಿ ನೆಲೆಗಳನ್ನು ದಾಟಿ ಮುಂದೆ ಸಾಗುತ್ತಿದೆ. ಜನರ ಜೀವನಶೈಲಿ, ಆದ್ಯತೆಗಳು ಬದಲಾಗಿವೆ. ಕಾಲಕ್ಕೆ ತಕ್ಕಂತೆ ಕವಿ, ಸಾಹಿತಿಗಳ ಮನೋಧೋರಣೆಗಳು ಬದಲಾಗುತ್ತಿವೆ. ಓದುಗರ ತುಡಿತಗಳೂ ಬದಲಾಗಿವೆ. ವಿಜ್ಞಾನ-ತಂತ್ರಜ್ಞಾನದ ವಿಸ್ಮಯಕಾರಿ ಆವಿಷ್ಕಾರಗಳು ಜೀವನವನ್ನು ಸುಲಭ ಹಾಗೂ ಆಕರ್ಷಕಗೊಳಿಸಿವೆ. ಆದರೆ ಪರಸ್ಪರ ಬಾಂಧವ್ಯ, ಪ್ರೀತಿ-ವಿಶ್ವಾಸಗಳು ಮರೆಯಾಗುತ್ತಿವೆ. ಇದನ್ನು 'ವಿಪರ್ಯಾಸ' ಕವಿತೆಯಲ್ಲಿ ಸುಂದರವಾಗಿ ಹಿಡಿದಿಟ್ಟಿದ್ದಾರೆ.

**ಫೋನಿನ ಪಿಕ್ಸೆಲ್ ದೊಡ್ಡದಾಯಿತು**
**ಮನಸ್ಸಿನ ಪರಿಧಿ ಕಡಿಮೆಯಾಯಿತು**
**ಪಿಕ್ಚರ್‌ಗಳಾದವು ಹೈರೆಸ್ಯುಲೇಷನ್**
**ಮುಖದಲಿ ನೋ ಸೆನ್ಸೇಷನ್**

ಒಟ್ಟಾರೆಯಾಗಿ ಸಂಕಲನದ ಎಲ್ಲ ಕವಿತೆಗಳೂ ವಾಚ್ಯವಾಗಿವೆ. ಬಹುತೇಕ ಅಂತ್ಯಪ್ರಾಸಯುಕ್ತ ಕವಿತೆಗಳಲ್ಲಿ ಉಪಮಾಲಂಕಾರ ಬಾಹುಳ್ಯವಿದೆ. ಆಧುನಿಕೋತ್ತರ ಕವಿತೆಯ ಪ್ರಮುಖ ಲಕ್ಷಣವಾಗಿರುವ ಈ ಮಿತಿಯನ್ನು ಒಪ್ಪಿಕೊಂಡರೂ ಅಲಂಕಾರ ವೈವಿಧ್ಯತೆ,

ಧ್ವನಿಪೂರ್ಣ ಹಾಗೂ ರಸಯುಕ್ತ ಕವಿತೆಗಳ ಕೊರತೆಯು ಈ ಸಂಕಲನದ ಮಿತಿಯಾಗಿದೆ. ಕರುಣ ರಸಾಭಿವ್ಯಕ್ತಿಯೊಂದಿಗೆ ಮನಸ್ಸನ್ನು ಆರ್ದ್ರಗೊಳಿಸುವ 'ರೂಢಾಪರಾಧಿ' ಕವಿತೆಯು ಈ ಮಾತಿಗೆ ಅಪವಾದವಾಗಿದೆ. ಜೀವನದಲ್ಲಿ ಎದುರಾಗುವ, ಕವಿಯ ಮನಸ್ಸನ್ನು ತಾಗುವ ಸಂಗತಿಗಳನ್ನು ನೇರವಾಗಿ ಹೇಳದೆ ರೂಪಕ, ಪ್ರತಿಮೆ ಹಾಗೂ ಸಂಕೇತಗಳ ಮೂಲಕ ಹೇಳಿದರೆ ಓದುಗರ ಕುತೂಹಲವನ್ನು ಹೆಚ್ಚಿಸುತ್ತವೆ. ಇದರೊಂದಿಗೆ ಕವಿತೆಯು ರಸ ಹಾಗೂ ಧ್ವನಿಪೂರ್ಣವಾಗಿದ್ದರೆ ಓದುಗರನ್ನು ಸೆರೆಹಿಡಿಯುವಲ್ಲಿ ಯಶಸ್ವಿಯಾಗುತ್ತದೆ. ಇದಕ್ಕೆ ಕಾಲೇಖಾನ್ ಅವರು ತಮ್ಮ ಅಧ್ಯಯನ ಮತ್ತು ದೃಷ್ಟಿಕೋನವನ್ನು ಇನ್ನಷ್ಟು ವಿಸ್ತಾರಗೊಳಿಸಿಕೊಳ್ಳಬೇಕು. ಕನ್ನಡದ ಎಲ್ಲ ಪಂಥಗಳ ಅತ್ಯುತ್ತಮ ಕವಿತೆಗಳನ್ನು ಅಧ್ಯಯನ ಮಾಡಬೇಕು. ಕೈದಿಗಳು ಸೇರಿದಂತೆ ಜನಮನವನ್ನು ಅರಳಿಸುವ, ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸುವ ಇನ್ನಷ್ಟು ಕವಿತೆಗಳು ಕಾಲೇಖಾನ್ ಅವರ ಲೇಖನಿಯಿಂದ ಹೊರಹೊಮ್ಮಲಿ.

**ಪರಾಮರ್ಶನ ಗ್ರಂಥಗಳು:**


1. ಶೇಷಗಿರಿರಾವ್ ಎಲ್.ಎಸ್., (2022), ಆಧುನಿಕ ಕನ್ನಡ ಸಾಹಿತ್ಯ ನಡೆದು ಬಂದ ದಾರಿ, ಬೆಂಗಳೂರು: ಅಂಕಿತ ಪುಸ್ತಕ.
2. ರಾಮಚಂದ್ರನ್ ಸಿ.ಎನ್., (2002), ವಸಾಹತೋತ್ತರ ಚಿಂತನೆ, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.
3. ಶಹಾಬುದ್ದೀನ್ ಎಂ. ಕಾಲೇಖಾನ್, (2024), ಕಾವ್ಯ ಸ್ಫೂರ್ತಿ, ಕಲಬುರ್ಗಿ: ಮಣೂರ ಮೀಡಿಯಾ.
4. ಶಹಾಬುದ್ದೀನ್ ಎಂ. ಕಾಲೇಖಾನ್, (2024), ಅದೃಷ್ಟ ಕೈದಿ, ಕಲಬುರ್ಗಿ: ಮಣೂರ ಮೀಡಿಯಾ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.